ನೀನು ಹೊತ್ತಿ ಉರಿವ ದೀವಿಗೆ
ನಾನು ಮುದ್ದಿಕ್ಕುವ ಪತಂಗ.
ಸುತ್ತಿ ಸುತ್ತಿ ಮುತ್ತಿಟ್ಟು ಮೈಸುಟ್ಟುಕೊಳ್ಳುತ್ತಿರುವೆ.
ಒಮ್ಮೊಮ್ಮೆ ನನ್ನ ಮುತ್ತಿಗೆಗೆ
ನೀನು ನಂದಿ ಹೋಗುವಿ.
ಹೊತ್ತಿಸಿದರೆ ಮತ್ತೆ ಬೆಳಗುವ ನೀನೆಲ್ಲಿ!
ಸುಟ್ಟುಕೊಂಡು ಜೀವತ್ತೆತ್ತಿರುವ
ನಾನೆಲ್ಲಿ!

★

ನಾನು ನಿನಗೆ ಎಸೆದ
ಕಲ್ಲುಗಳನ್ನೆತ್ತಿಕೊಂಡು
ನೀನು ಮನೆ ಕಟ್ಟಿಕೊಂಡಿ.
ನನ್ನಲ್ಲಿರುವ ಕಲ್ಲುಗಳು ಖಾಲಿಯಾದವು.
ಕಟ್ಟುವ ಕಲೆ ನಿನ್ನಿಂದ ಕಲಿಯಲಿಲ್ಲ.

★

ನಾನಾಡಿದ ಆ ಮಾತು ನಿನಗೆ ಗಾಯವಾಯಿತು.
ಮರು ಕ್ಷಣವೇ ನಾನು ತಲ್ಲಣಿಸಿದೆ.
ನನ್ನ ಮನಸ್ಸನ್ನು ಹಸನ ಮಾಡಿಕೊಳ್ಳವೆ ಎಂದು ನಿನಗೆ
ನಿವೇದಿಸಿದೆ.
ತೀಕ್ಷ್ಣವಾಗಿ ನೋಡಿ
'ನಿನ್ನೊಳಗೊಂದು ಮಹಾಮಳೆ ತಂದುಕೋ'
ಎಂದದ್ದು ಕೇಳಿ ದಿಕ್ಕುಗೇಡಿಯಾಗಿರುವೆ.

★

ನೀನು ತಂಗಾಳಿ
ನೀನು ತಿಳಿನೀರು
ನೀನು ಹೂ ಬಿಸಿಲು
ಮತ್ತೆ ನಾನ್ಯಾಕೆ ಎಲ್ಲವನ್ನೂ
ಮಾಲಿನ್ಯ ಮಾಡುತ್ತಿದ್ದೇನೆ!

★

ನಿನ್ನ ಮನದ ಕದ
ಯಾವಾಗಲೂ ತೆರೆದಿರುತ್ತದೆ.
ಬೇಕು ಬೇಡ
ಸರಿ ತಪ್ಪು
ಒಳಿತು ಕೆಡಕು
ಎಲ್ಲ ಸ್ವೀಕರಿಸುವ
ನೀನೆಲ್ಲಿ?
ಮನದ ಕದಗಳನ್ನು
ಮತ್ತೆ ಮತ್ತೆ ಮುಚ್ಚಿಕೊಳ್ಳವ
ನಾನೆಲ್ಲಿ?

★

ನೀನು ಬೆಳಗುವ ಸೂರ್ಯನಂತೆ
ನಾನು ಅಲ್ಲಲ್ಲೆ ಹುಟ್ಟಿ ಗಾಳಿಗೆ ಸರಿಯುತ್ತ
ನಿನಗೆ ಅಡ್ಡ ಬಂದು
ನಿನ್ನ ಬೆಳಕಿಗೆ ದಕ್ಕೆ ತಂದು
ಹಾಗೇ ಸರಿದು ಮಾಯವಾಗುವ
ಮೋಡದಂತೆ.
ನೀನು ಸ್ಥಿರ
ನಾನು ಚರ.

★

ಸ್ವರ್ಗ
ಸಂತಸ
ನೆಮ್ಮದಿ
ಅವು ಏನೇನಿವೆಯೋ
ಅವುಗಳನು ಅಲೆದಲೆದು
ಹುಡುಕಿ
ದಣಿದು ಬಸವಳಿದು
ನಿಂತಾಗ
ನಿನ್ನನ್ನು ನೋಡಿದೆ:
ಬರಿ ಕಣ್ಣಿನಿಂದ ಮಾತ್ರವಲ್ಲ
ಅಂತರಂಗದಿಂದ
ಹುಡುಕಿದ ಎಲ್ಲವೂ
ಉದುರಿ ಹೋದವು